ಸಂಕೇತ ಸಂಖ್ಯೆ : **85-K** ವಿಷಯ : ಸಮಾಜ ವಿಜ್ಞಾನ

**Code No. : 85-K** **Subject : SOCIAL SCIENCE**

**( ಕನ್ನಡ ಭಾಷಾಂತರ / Kannada Version )**

**( ಹೊಸ ಪಠ್ಯಕ್ರಮ / New Syllabus )**

**( ಶಾಲಾ ಅಭ್ಯರ್ಥಿ / Regular Fresh )**

***ಸಾಮಾನ್ಯ ಸೂಚನೆಗಳು :***

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಯ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಗಳ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಸೀಸದ ಕಡ್ಡಿ (ಪೆನ್ಸಿಲ್) ಯಿಂದ ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು–ಆಯ್ಕೆ, ಖಾಲಿ ಸಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

viii) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $10 \times 1 = 10$

1. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದ ಗವರ್ನರ್ ಜನರಲ್

   (A) ಲಾರ್ಡ್ ಕರ್ಜನ್

   (B) ಲಾರ್ಡ್ ಡಾಲ್‌ಹೌಸಿ

   (C) ಲಾರ್ಡ್ ವೆಲ್ಲೆಸ್ಲಿ

   (D) ಲಾರ್ಡ್ ಕಾರನ್‌ವಾಲಿಸ್

2. **A ಪಟ್ಟಿ**ಯಲ್ಲಿ ನಾಯಕರು ಮತ್ತು **B ಪಟ್ಟಿ**ಯಲ್ಲಿ ಅವರ ಕಾರ್ಯಗಳನ್ನು ಸೂಚಿಸಲಾಗಿದೆ. ಅವುಗಳಿಗೆ ಸರಿ ಹೊಂದುವ ಉತ್ತರದ ಗುಂಪನ್ನು ಗುರುತಿಸಿ :

| ***A ಪಟ್ಟಿ*** | ***B ಪಟ್ಟಿ*** |
|---|---|
| (a) ಗೋರ್ಬಚೆವ್ | (i) ರಾಷ್ಟ್ರೀಯ ಫ್ಯಾಸಿಸ್ಟ್ ಪಕ್ಷ |
| (b) ಸ್ಟ್ಯಾಲಿನ್ | (ii) ನಾಜಿ ಪಕ್ಷ |
| (c) ಹಿಟ್ಲರ್ | (iii) ಪಂಚವಾರ್ಷಿಕ ಯೋಜನೆಗಳು |
| (d) ಮುಸೋಲಿನಿ | (iv) ಗ್ಲಾಸ್‌ನೋಸ್ತ |

| | ***a*** | ***b*** | ***c*** | ***d*** |
|---|---|---|---|---|
| (A) | iv | iii | ii | i |
| (B) | i | ii | iii | iv |
| (C) | iii | iv | i | ii |
| (D) | ii | i | iv | iii |

3. ರಾಷ್ಟ್ರೀಯ ಸಾಕ್ಷರತಾ ಮಿಷನ್ ಸ್ಥಾಪಿಸಿದ ವರ್ಷ

   (A) 1987

   (B) 1988

   (C) 1989

   (D) 1990

4. 'ಆಫ್ರಿಕಾದ ಗಾಂಧೀ' ಎಂದು ಪ್ರಸಿದ್ಧರಾದವರು

   (A) ಟಿ.ಬಿ. ಕುನ್ಹಾ

   (B) ಮಾರ್ಟಿನ್ ಲೂಥರ್ ಕಿಂಗ್

   (C) ಖಾನ್ ಅಬ್ದುಲ್ ಗಫಾರ್ ಖಾನ್

   (D) ನೆಲ್ಸನ್ ಮಂಡೇಲಾ

5. 'ಮಾನವಕುಲ ತಾನೊಂದೇ ವಲಂ' ಈ ವಾಕ್ಯವನ್ನು ವ್ಯಕ್ತಪಡಿಸಿದವರು

   (A) ಜನ್ನ (B) ಪಂಪ

   (C) ರನ್ನ (D) ಪೊನ್ನ

6. ಈ ನಕ್ಷೆಯಲ್ಲಿ ಗುರುತಿಸಿರುವ ನದಿ ಕಣಿವೆ ಯೋಜನೆಗಳನ್ನು ಸರಿಯಾಗಿ ಹೋಲಿಕೆಯಾಗುವುದು.



   (A) 1 — ಹಿರಾಕುಡ್, 2 — ತುಂಗಭದ್ರಾ, 3 — ಭಾಕ್ರಾ ನಂಗಲ್

   (B) 1 — ತುಂಗಭದ್ರಾ, 2 — ಭಾಕ್ರಾ ನಂಗಲ್, 3 — ಹಿರಾಕುಡ್

   (C) 1 — ಭಾಕ್ರಾ ನಂಗಲ್, 2 — ತುಂಗಭದ್ರಾ, 3 — ಹಿರಾಕುಡ್

   (D) 1 — ಭಾಕ್ರಾ ನಂಗಲ್, 2 — ಹಿರಾಕುಡ್, 3 — ತುಂಗಭದ್ರಾ

7. “ಭಾರತದ ನೈಜ ಅಭಿವೃದ್ಧಿಗೆ ಗ್ರಾಮಗಳ ಅಭಿವೃದ್ಧಿ” ಎಂದವರು

(A) ಮಹಾತ್ಮ ಗಾಂಧೀಜಿ

(B) ವಿನೋಬಾ ಭಾವೆ

(C) ದಾದಾಭಾಯಿ ನವರೋಜಿ

(D) ಜವಾಹರಲಾಲ್ ನೆಹರು

8. ವಿಶ್ವ ವ್ಯಾಪಾರ ಸಂಘಟನೆ ( W.T.O. ) ಯ ಕೇಂದ್ರ ಕಚೇರಿ ಇರುವುದು

(A) ಜಿನೇವಾ

(B) ಪ್ಯಾರಿಸ್

(C) ರೋಮ್

(D) ನವ ದೆಹಲಿ

9. ಬ್ಯಾಂಕುಗಳ ತಾಯಿ

(A) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

(B) ಭಾರತೀಯ ರಿಸರ್ವ್ ಬ್ಯಾಂಕ್

(C) ಸಹಕಾರಿ ಬ್ಯಾಂಕ್

(D) ಭೂ ಅಭಿವೃದ್ಧಿ ಬ್ಯಾಂಕ್

10. ಬಾಕ್ಸೈಟನ್ನು ಅದ್ಭುತ ಲೋಹವೆಂದು ಕರೆಯಲು ಕಾರಣ, ಇದು

(A) ವೈವಿಧ್ಯಮಯ ಬಣ್ಣಗಳಿಂದ ಕೂಡಿರುತ್ತದೆ

(B) ವೈವಿಧ್ಯಮಯ ಉಪಯೋಗಗಳಿಗಾಗಿ ಬಳಸಲ್ಪಡುವುದು

(C) ಅತೀ ಕಡಿಮೆ ಅದಿರಿನಿಂದ ಹೆಚ್ಚು ಲೋಹ ಪಡೆಯಬಹುದು

(D) ವೈವಿಧ್ಯಮಯ ವಸ್ತುಗಳಿಂದ ಮಿಶ್ರಣ ಹೊಂದಿದೆ

II. ಈ ಕೆಳಗಿನ ಪ್ರಶ್ನೆಗಳಿಗೆ ***ಒಂದೊಂದು*** ವಾಕ್ಯದಲ್ಲಿ ಉತ್ತರ ಬರೆಯಿರಿ : $14 \times 1 = 14$

11. ಕಾಲಚಕ್ರ ಎಂದರೇನು ?

12. ಶೀತಲ ಸಮರವೆಂದರೇನು ?

13. 19ನೇ ಶತಮಾನದಲ್ಲಿ ರಷ್ಯಾವನ್ನು ಆಳಿದ ದೊರೆಗಳು ಯಾರು ?

14. ಅಂತರರಾಷ್ಟ್ರೀಯ ನ್ಯಾಯಾಲಯ ಎಲ್ಲಿದೆ ?

15. ವಿಶ್ವಸಂಸ್ಥೆಯ ಭದ್ರತಾ ಸಮಿತಿಯು ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಏಕೆ ?

16. ವರದಕ್ಷಿಣೆ ಎಂದರೇನು ?

17. ಬಾಲಕಾರ್ಮಿಕ ಎಂದರೆ ಯಾರು ?

18. ದೂರಸಂವೇದಿ ಎಂದರೇನು ?

19. GPS ಬಹಳ ಉಪಯುಕ್ತವಾಗಿದೆ, ಹೇಗೆ ?

20. ವಲಸೆಗಾರರು ಎಂದರೆ ಯಾರು ?

21. ಜನಸಾಂದ್ರತೆ ಎಂದರೇನು ?

22. ತಲಾ ಆದಾಯವನ್ನು ಹೇಗೆ ಪಡೆಯಬಹುದು ?

23. ಮಾನವ ಅಭಿವೃದ್ಧಿ ಸೂಚಿಯನ್ನು ಅರ್ಥೈಸಿ.

24. ಜಾಗತೀಕರಣ ಎಂದರೇನು ?

III. ಈ ಕೆಳಗಿನ ಪ್ರಶ್ನೆಗಳಿಗೆ **ಎರಡರಿಂದ ನಾಲ್ಕು** ವಾಕ್ಯಗಳಲ್ಲಿ ಉತ್ತರಿಸಿ : 15 × 2 = 30

25. ರಾಬರ್ಟ್ ಕ್ಲೈವ್‌ನ ದ್ವಿಮುಖ ಸರ್ಕಾರವನ್ನು ವಿವರಿಸಿ.

ಅಥವಾ

ಭಾರತಕ್ಕೆ ಹೊಸ ಜಲಮಾರ್ಗ ಕಂಡುಹಿಡಿಯಲು ಪ್ರೇರೇಪಿಸಿದ್ದು, ಏನು ?

26. ಹೈದ್ರಾಬಾದ್ ನಿಜಾಮನು ಹೇಗೆ ಸ್ವತಂತ್ರಗೊಂಡನು ?

27. ಜ್ಯೋತಿಭಾ ಫುಲೆಯವರ ಸಾಮಾಜಿಕ ಸುಧಾರಣೆಗಳು ಅತ್ಯಂತ ಜನಪ್ರಿಯ, ಏಕೆ ?

28. ಸ್ವಾತಂತ್ರ್ಯಾನಂತರ ಭಾಷಾವಾರು ಪ್ರಾಂತ್ಯಗಳ ರಚನೆ ಅನಿವಾರ್ಯವಾಗಿತ್ತು, ಏಕೆ ?

29. ಭಯೋತ್ಪಾದನೆಯಿಂದ ಉಂಟಾಗುವ ನಾಲ್ಕು ಪರಿಣಾಮಗಳನ್ನು ತಿಳಿಸಿ.

30. ಪರಿಸರ ಮಾಲಿನ್ಯದ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರಲ್ಲಿ ಹೇಗೆ ಜಾಗೃತಿಯನ್ನು ಮೂಡಿಸಬಹುದು ?

31. ಭಾರತದ ಪ್ರಾಕೃತಿಕ ಲಕ್ಷಣಗಳಾವುವು ?

32. ಭಾರತದ ವ್ಯವಸಾಯವು ಮಾನ್ಸೂನ್ ಮಾರುತಗಳೊಂದಿಗೆ ಆಡುವ ಜೂಜಾಟ, ಏಕೆ ?

33. ಮಣ್ಣಿನ ಸವೆತವನ್ನು ಹೇಗೆ ತಡೆಗಟ್ಟುವಿರಿ ?

34. ಮರುಭೂಮಿ ಅರಣ್ಯಗಳ ಲಕ್ಷಣಗಳನ್ನು ತಿಳಿಸಿ.

35. ಭೂ ಬಳಕೆಯ ಮೇಲೆ ಆರ್ಥಿಕ ಅಂಶಗಳು ಪ್ರಭಾವ ಬೀರುತ್ತವೆ, ಹೇಗೆ ?

36. ಪ್ರಾಕೃತಿಕ ವಿನಾಶಕಾರಕಗಳು ಯಾವುವು ?

37. ಉದಾರೀಕರಣವು ಉತ್ಪಾದಕರಿಗೆ ಅನುಕೂಲ, ಹೇಗೆ ?

38. ಯಾರೇ ಒಬ್ಬ ಮನುಷ್ಯನಾಗಲಿ ಸ್ವ–ಉದ್ಯೋಗ ಉದ್ದಿಮೆಯನ್ನು ಸ್ಥಾಪಿಸಲು ಇಷ್ಟಪಟ್ಟಲ್ಲಿ ಸಲಹೆ ಸೌಕರ್ಯಗಳಿಗೆ ಆರಿಸಿಕೊಳ್ಳಬೇಕಾದ ಸಂಸ್ಥೆಗಳು ಯಾವುವು ?

39. ಸರ್ದಾರ್ ವಲ್ಲಭಭಾಯಿ ಪಟೇಲರು ಭಾರತದ ದೇಶೀಯ ಸಂಸ್ಥಾನಗಳನ್ನು ವಿಲೀನಗೊಳಿಸಿ ಯಶಸ್ವಿಯಾದದ್ದು, ಹೇಗೆ ?

IV. ಈ ಕೆಳಗಿನ ಪ್ರಶ್ನೆಗಳಿಗೆ ***ಆರು ಅಥವಾ ಎಂಟು*** ವಾಕ್ಯಗಳಲಿ ಉತ್ತರಿಸಿ : $6 \times 3 = 18$

40. 1857 ರ ದಂಗೆಯ ವಿಫಲತೆಗೆ ಕಾರಣಗಳು ಯಾವುವು ?

***ಅಥವಾ***

ಜಮೀನ್ದಾರಿ ಪದ್ಧತಿಗಿಂತ ರೈತವಾರಿ ಪದ್ಧತಿ ಭಿನ್ನ ಹೇಗೆ ?

41. ಅಂತರರಾಷ್ಟ್ರೀಯ ಸಂಬಂಧ ವೃದ್ಧಿಗಾಗಿ ಭಾರತ ಅಳವಡಿಸಿಕೊಂಡ ಪಂಚಶೀಲ ತತ್ತ್ವಗಳಾವುವು ?

***ಅಥವಾ***

ಭಾರತ ಹಾಗೂ ರಷ್ಯಾಗಳ ಸಂಬಂಧವನ್ನು ವಿವರಿಸಿ.

42. ಅಸ್ಪೃಶ್ಯತೆ ತಡೆಗೆ ಕೈಗೊಂಡ ಶಾಸನಾತ್ಮಕ ಕ್ರಮಗಳಾವುವು ?

***ಅಥವಾ***

ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳನ್ನು ವಿವರಿಸಿ.

43. ಭಾರತದಲ್ಲಿ ರಸ್ತೆ ಸಾರಿಗೆಯ ಸಮಸ್ಯೆಗಳು ಯಾವುವು ?

***ಅಥವಾ***

ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳು ಯಾವುವು ?

44. 'ಗ್ರಾಮೀಣಾಭಿವೃದ್ಧಿಯ ಮಹತ್ತ್ವ'ವನ್ನು ವಿವರಿಸಿ.

***ಅಥವಾ***

ಕೇಂದ್ರ ಸರ್ಕಾರವು ಸಂಗ್ರಹಿಸುವ ಪ್ರಮುಖ ತೆರಿಗೆಯೇತರ ಆದಾಯದ ಮೂಲಗಳನ್ನು ತಿಳಿಸಿ.

45. ಉಳಿತಾಯ ಖಾತೆ ಹಾಗೂ ಚಾಲ್ತಿ ಖಾತೆಗಳಿಗಿರುವ ವ್ಯತ್ಯಾಸಗಳೇನು ?

***ಅಥವಾ***

ವಿಮಾ ಪಾಲಸಿಯನ್ನು ತೆಗೆದುಕೊಳ್ಳಲು ಅನುಸರಿಸಬೇಕಾದ ವಿಧಾನಗಳನ್ನು ವಿವರಿಸಿ.

V. ಈ ಕೆಳಗಿನ ಪ್ರಶ್ನೆಗಳಿಗೆ ***ಎಂಟರಿಂದ ಹತ್ತು*** ವಾಕ್ಯಗಳಲ್ಲಿ ಉತ್ತರಿಸಿ : 4

46. ಭಾರತದ ರಾಷ್ಟ್ರೀಯ ಹೋರಾಟದಲ್ಲಿ ಸುಭಾಶ್ ಚಂದ್ರ ಬೋಸರ ಪಾತ್ರವನ್ನು ವಿವರಿಸಿ.

VI. 47. ಭಾರತದ ನಕ್ಷೆಯನ್ನು ಬರೆದು, ಕೆಳಗಿನವುಗಳನ್ನು ಗುರುತಿಸಿ : 1 + 3 = 4

a) $82\frac{1}{2}^{\circ}$ ಪೂ. ರೇಖಾಂಶ

b) ನಾಗಾರ್ಜುನ ಸಾಗರ ಯೋಜನೆ

c) ಹಟ್ಟಿ ಚಿನ್ನದ ಗಣಿ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 47 ರ ಬದಲಿಗೆ)***

ಭಾರತೀಯರ ಜನಜೀವನದ ಮೇಲೆ ಹಿಮಾಲಯದ ಪ್ರಯೋಜನಗಳೇನು ? 4